REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 | ಸಂಚಿಕೆ : 25 | 24 ಸೆಪ್ಟೆಂಬರ್ 2025 | ಬುಧವಾರ | ಪುಟಗಳು : 8 | ಬೆಲೆ : 2/-

## ಅಶೋಕನಗರ ಸಹಕಾರ ಬ್ಯಾಂಕಿನ ಸುವರ್ಣ ಮಹೋತ್ಸವ :
## ಆರ್ಥಿಕ ದುರ್ಬಲರಿಗೂ ಸಾಲ ನೀಡಲು ಶ್ರೀ ಎಚ್.ಕೆ. ಪಾಟೀಲರ ಸಲಹೆ

**ಬೆಂಗಳೂರು** : ಶ್ರೀಮಂತರಿಗೆ ಸಾಲ ನೀಡುವುದರ ಜತೆಗೆ ಬೀದಿ ಬದಿ ವ್ಯಾಪಾರಿಗಳಿಗೂ ಸಾಲ ನೀಡಿದರೆ, ಅವರ ಬಾಳು ಸುಧಾರಿಸಲಿದೆ. ಸಹಕಾರಿ ಆಶಯವೂ ಈಡೇರುತ್ತದೆ. ಈ ನಿಟ್ಟಿನಲ್ಲಿ ಬ್ಯಾಂಕುಗಳು ಕಾರ್ಯನಿರ್ವಹಿಸಬೇಕು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಎಚ್.ಕೆ.ಪಾಟೀಲರು ಹೇಳಿದರು.



ಅಶೋಕನಗರ ಸಹಕಾರ ಬ್ಯಾಂಕ್ ನಿಯಮಿತದ ಶ್ರೀರಾಮ ಮಂದಿರದಲ್ಲಿ ಆಯೋಜಿಸಿದ್ದ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, “ಆರ್ಥಿಕ ದುಬರ್ಲರು, ಬೀದಿ ಬದಿ ವ್ಯಾಪಾರಿಗಳು, ಉದ್ದಿಮೆ ಸ್ಥಾಪಿಸುವವರಿಗೆ ಸಹಕಾರ ಬ್ಯಾಂಕುಗಳು ಶೇ.25ರಷ್ಟು ಸದಸ್ಯತ್ವ, ಸಾಲ ಸೌಲಭ್ಯ ನೀಡಿದರೆ ಸಹಕಾರ ಬ್ಯಾಂಕುಗಳು ಬೃಹದಾಕಾರವಾಗಿ ಬೆಳೆಯುತ್ತವೆ,” ಎಂದರು.

ಅಶೋಕನಗರ ಸಹಕಾರ ಬ್ಯಾಂಕ್ ನಿಯಮಿತದ ಅಧ್ಯಕ್ಷರಾದ ಶ್ರೀ ಕೆ.ಎಂ. ನಾಗರಾಜ್‌ರವರು ಮಾತನಾಡಿ, ಈ ಬ್ಯಾಂಕ್ ಸ್ಥಾಪನೆಯಾಗಿ 52 ವರ್ಷ ಸಂದಿದ್ದು, 123 ಕೋಟಿ ಠೇವಣಿ ಹೊಂದಿದೆ. 2 ಶಾಖೆಗಳಿವೆ. 5900ಕ್ಕೂ ಹೆಚ್ಚು ಸದಸ್ಯರಿದ್ದಾರೆ. ನಾನು ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದಾಗ ಬ್ಯಾಂಕ್ ರೂ. 40 ಕೋಟಿ ವಹಿವಾಟು ನಡೆಸುತ್ತಿತ್ತು. ಇಂದು ರೂ. 209 ಕೋಟಿ ವಹಿವಾಟು ನಡೆಯುತ್ತಿದೆ. ಮುಂದಿನ ಐದು ವರ್ಷಗಳಲ್ಲಿ ರೂ. 500 ಕೋಟಿ ವಹಿವಾಟು ನಡೆಸುವುದರ ಜತೆಗೆ, ಇನ್ನೂ ಹಲವು ಹೊಸ ಶಾಖೆಗಳನ್ನು ತೆರೆಯುವ ಗುರಿ ಹೊಂದಲಾಗಿದೆ,” ಎಂದರು.

ಶಾಸಕ ಶ್ರೀ ಎಲ್.ಎ. ರವಿಸುಬ್ರಹ್ಮಣ್ಯ, ಕರ್ನಾಟಕ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಶ್ರೀ ಎಚ್.ಎಂ. ರೇವಣ್ಣ, ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಪಿ.ಆರ್.ಚಂದ್ರಶೇಖರ್, ಕಾರ್ಯದರ್ಶಿ ಶ್ರೀಮತಿ ಎಸ್.ಟಿ. ಮಂಗಳಾ, ಮಾಜಿ ಮೇಯರ್ ಶ್ರೀ ಬಿ.ಎಸ್. ಸತ್ಯನಾರಾಯಣ, ಸಹಕಾರ ಸಂಘಗಳ ಜಂಟಿ ನಿಬಂಧಕ ಶ್ರೀ ಎನ್. ವೆಂಕಟೇಶ್ ಉಪಸ್ಥಿತರಿದ್ದರು.



ಹೊಸಕೋಟೆಯ ದಿ ಟೌನ್ ಕೋ-ಆಪರೇಟಿವ್ ಬ್ಯಾಂಕಿನ 112ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ 3
ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ : 119ನೇ ವಾರ್ಷಿಕ ಸರ್ವಸದಸ್ಯರ ಸಭೆ 4
ನಿಮ್ಮ ಪ್ರಶ್ನೆ – ನಮ್ಮ ಉತ್ತರ 7

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



# ಸರ್ವರಿಗೂ ಸಮಪಾಲು ಸರ್ವರಿಗೂ ಸಮ ಬಾಳು ಸಾಕಾರಗೊಳ್ಳಲಿ

ನಿಮಗೆಲ್ಲ ಗೊತ್ತಿರುವಂತೆ ಸಹಕಾರ ಕ್ಷೇತ್ರದ ಮುಖ್ಯ ಗುರಿಯೇ ಸಾಮಾಜಿಕ ಕಳಕಳಿ, ಪರಸ್ಪರ ಸಹಾಯ ಅದಕ್ಕಾಗಿಯೇ ಒಂದಾಗುವುದಾಗಿದೆ. ಇದಕ್ಕಾಗಿ ಸಮಯೋಚಿತ ಚಿಂತನೆಗಳನ್ನು ಹುಟ್ಟುಹಾಕುವ, ದೀರ್ಘಕಾಲೀನ ಅಭಿವೃದ್ಧಿಯ ಯೋಜನೆಗಳಿಗೆ ರೂಪ ಕೊಡುವುದಾಗಿದೆ. ಜೊತೆಗೆ, ಆರ್ಥಿಕ ದುರ್ಬಲರಿಗೆ ಅಗತ್ಯ ನೆರವು ನೀಡುವ ಮೂಲಕ ಸಬಲರನ್ನಾಗಿಸುವುದಾಗಿದೆ. ಆದರೆ ಪ್ರಸ್ತುತ ದೇಶದಲ್ಲಿ ಬಹು ಸಂಖ್ಯಾತ ಜನ ಬಡತನದ ರೇಖೆಯ ಕೆಳಗಿದ್ದಾರೆ ಹಾಗೂ ಈ ಜನರು ತಮ್ಮ ಬದುಕಿಗಾಗಿ ನಿತ್ಯ ಹೋರಾಟಗಳನ್ನು ಮಾಡಬೇಕಾದ ಪರಿಸ್ಥಿತಿ ಇದೆ ಎನ್ನುತ್ತದೆ ವರದಿಯೊಂದು.

ಅಸಂಘಟಿತ ವಲಯದ ದುಡಿಮೆಗಾರರ, ವ್ಯಾಪಾರಿಗಳ, ಟೈಲರಿಂಗ್, ಇನ್ನಿತರ ಕೆಲಸ ಮಾಡಿ ಬದುಕು ನಡೆಸುವ ಮಹಿಳೆಯರಿಗೆ ಸ್ವಲ್ಪ ಹಣಕಾಸಿನ ಸಾಲ ಸೌಲಭ್ಯ ದೊರೆತರೆ ಅವರುಗಳು ಕನಿಷ್ಠ ನೆಮ್ಮದಿಯಿಂದ ಬದುಕಲು ಸಾಧ್ಯವಾಗಲಿದೆ. ಈ ಜನರು ಎಷ್ಟೇ ದುಡಿದರು, ಉತ್ತಮ ಆದಾಯ ಗಳಿಸಲು ಸಾಧ್ಯವಿಲ್ಲವಾಗಿದೆ. ಈ ಜನರಿಗೆ ಯಾವುದೇ ಬ್ಯಾಂಕುಗಳಲ್ಲಿ ಸೂಕ್ತ ಹಣಕಾಸು ಸೌಲಭ್ಯ ದೊರೆಯದೆ ಇರುವ ಕಾರಣ; ಇವರುಗಳು ಖಾಸಗಿಯವರ ಬಳಿ ದುಬಾರಿ ಬಡ್ಡಿಗೆ ಹಣ ತೆಗೆದುಕೊಳ್ಳುತ್ತಾರೆ. ದುಡಿದಿದ್ದೆಲ್ಲವೂ ಬಡ್ಡಿಗೆ, ಚಕ್ರ ಬಡ್ಡಿಗೆ ತೆತ್ತು ಕೊನೆಗೆ ಬರಿಗೈಯಾಗಿ ಉಳಿಯುತ್ತಾರೆ.

ನೋಡಿ, ನೊಬೆಲ್ ಪ್ರಶಸ್ತಿ ಪುರಸ್ಕೃತ ಆರ್ಥಿಕ ತಜ್ಞ ಅಮರ್ತ್ಯ ಸೇನ್ ಅವರ ಪ್ರಕಾರ; ದೇಶದಲ್ಲಿ ಸಂಪತ್ತಿನ ಅಸಮಾನತೆ ಹೆಚ್ಚಾಗಿದೆ. 2021ರಲ್ಲಿ ನಮ್ಮ ಜನಸಂಖ್ಯೆಯ ಕೇವಲ ಶೇ.10 ಶ್ರೀಮಂತರು, ಒಟ್ಟು ಸಂಪತ್ತಿನ ಶೇ.65 ಅನ್ನು ಹೊಂದಿದ್ದಾರೆ. ಇದರಿಂದ ಸಮಾಜದಲ್ಲಿ ಬಡ– ಸಿರಿವಂತರ ನಡುವಣ ಅಂತರ ದಿನೇ ದಿನೇ ಹೆಚ್ಚಾಗುತ್ತಿದೆ.

ನಮ್ಮಲ್ಲಿ ಹೈನುಗಾರಿಕೆಯನ್ನು ಸಹಕಾರ ಕ್ಷೇತ್ರದಡಿಯಲ್ಲಿ ತಂದ ನಂತರ ಕ್ರಾಂತಿಕಾರಕ ಬದಲಾವಣೆ ಯಾಗಿರುವುದನ್ನು ಎಲ್ಲರೂ ನೋಡಿರುತ್ತಿರಿ. ಹೈನುಗಾರಿಕೆಯಿಂದ ನಮ್ಮ ಗ್ರಾಮೀಣರ ಕೈಯಲ್ಲಿ ಮುಖ್ಯವಾಗಿ ಮಹಿಳೆಯರ ಕೈಯಲ್ಲಿ ಹಣ ಹರಿದಾಡುತ್ತಿದೆ. ಇದರಿಂದ ಆ ಕುಟುಂಬಗಳು ನೆಮ್ಮದಿ ಕಂಡಿವೆ ಎನ್ನುವುದನ್ನು ಗಮನಿಸಬಹುದು. ಇದು ಸಹಕಾರ ಕ್ಷೇತ್ರದ ಮಹತ್ವವನ್ನು ತೋರುತ್ತದೆ.

ನಮ್ಮ ಸಹಕಾರ ವಲಯದ ಮೇಲೆ ಅಸಂಘಟಿತ, ನಿರ್ಲಕ್ಷಿತ ಸಮುದಾಯದವರು ಅಪಾರ ನಿರೀಕ್ಷೆ ಇರಿಸಿಕೊಂಡಿದ್ದಾರೆ. ಅವರುಗಳನ್ನು ಸಹಕಾರ ಕ್ಷೇತ್ರದ ಅಡಿಯಲ್ಲಿ ತಂದು ನೆರವು ನೀಡಬೇಕಿದೆ. ಅದಕ್ಕಾಗಿ ಆರ್ಥಿಕ ದುರ್ಬಲರಿಗೆ, ಬೀದಿ ಬದಿ ವ್ಯಾಪಾರಿಗಳಿಗೆ, ಸಣ್ಣ ಪುಟ್ಟ ಉದ್ದಿಮೆ ಸ್ಥಾಪಿಸುವವರಿಗೆ ಸಹಕಾರ ಬ್ಯಾಂಕುಗಳು ಶೇ.25ರಷ್ಟು ಸದಸ್ಯತ್ವ, ಸಾಲ ಸೌಲಭ್ಯ ನೀಡಿ ಅವರುಗಳ ಬದುಕನ್ನು ಉತ್ತಮಪಡಿಸಬೇಕಿದೆ. ಇದು ಸಾಧ್ಯವಾದಲ್ಲಿ ಸಹಕಾರ ಕ್ಷೇತ್ರ ಇನ್ನೂ ಬೃಹದಾಕಾರವಾಗಿ ಬೆಳೆಯುತ್ತವೆ.

ಮುಂದಿನ ದಿನಗಳಲ್ಲಿ ಈ ವರ್ಗದ ಜನರಿಗೆ ಆರ್ಥಿಕ ಶಕ್ತಿ ತುಂಬಲು ಸಹಕಾರ ಕ್ಷೇತ್ರ ಮುಂದಾದಲ್ಲಿ ಈ ವರ್ಗದ ಜನರೂ ನೆಮ್ಮದಿಯಿಂದ ಬಾಳುವಂತಾಗಲಿದೆ. ನಮ್ಮ ಸಹಕಾರದ ಧ್ಯೇಯ: ಸರ್ವರಿಗೂ ಸಮಪಾಲು ಸರ್ವರಿಗೂ ಸಮ ಬಾಳು ಈಡೇರಿದಂತಾಗುತ್ತದೆ. ಇದರಿಂದ ದೇಶದ ಸರ್ವತೋಮುಖ ಅಭಿವೃದ್ಧಿ, ಪ್ರಗತಿ ಸಾಧ್ಯ ಎಂದು ನಾನು ನಂಬಿದ್ದೇನೆ.

▸▸ ಎಚ್.ಕೆ. ಪಾಟೀಲ

## ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಏರ್ಪಡಿಸಿದ್ದ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಮುಂದೂಡುವ ಕುರಿತು

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ದಿನಾಂಕ : 27.09.2025ರಂದು ಗದಗ ಜಿಲ್ಲೆಯ ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ಸಭಾಂಗಣ, ಹುಬ್ಬಳ್ಳಿ–ಗದಗ ರಸ್ತೆ, ಹುಲಕೋಟಿ – 582205 ಇಲ್ಲಿ ಏರ್ಪಡಿಸಲಾಗಿತ್ತು. ಕಾರಣಾಂತರಗಳಿಂದ ವಿಚಾರ ಸಂಕಿರಣವನ್ನು ದಿನಾಂಕ : 04.10.2025ರ ಶನಿವಾರಕ್ಕೆ ಮುಂದೂಡಲಾಗಿದೆ.

ಸದರಿ ವಿಚಾರ ಸಂಕಿರಣದಲ್ಲಿ ಕಾರ್ಪೋರೇಟ್ ಆಡಳಿತ ಪರಿಕಲ್ಪನೆಗಳು ಮತ್ತು ಸಿದ್ಧಾಂತಗಳು ಹಾಗೂ ನಿರ್ದೇಶಕ ಮಂಡಳಿಯ ಪಾತ್ರ, ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಗ್ರಾಹಕರ ಸೇವೆ / ವ್ಯವಹಾರ ಅಭಿವೃದ್ಧಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳಲ್ಲಿ ಇತ್ತೀಚಿನ ತಿದ್ದುಪಡಿಗಳ ವಿವರ ವಿಷಯಗಳ ಕುರಿತು ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ಸದರಿ ಕಾರ್ಯಕ್ರಮವನ್ನು ದಿನಾಂಕ : 04.10.2025ರಂದು ಬೆಳಗ್ಗೆ 08.30ಗಂಟೆಗೆ ಉಪಹಾರ ಹಾಗೂ ನೋಂದಣಿಯೊಂದಿಗೆ ಪ್ರಾರಂಭಿಸಲಾಗುವುದು.

ಸದರಿ ವಿಚಾರ ಸಂಕಿರಣದಲ್ಲಿ ಭಾಗವಹಿಸುವವರು ಮಹಾಮಂಡಳದಲ್ಲಿ ದಿನಾಂಕ : 30.09.2025ರೊಳಗಾಗಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಈ ವಿಚಾರ ಸಂಕಿರಣದಲ್ಲಿ ತಾವುಗಳು ಭಾಗವಹಿಸಿ, ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.

# ಹೊಸಕೋಟೆಯ ದಿ ಟೌನ್ ಕೋ–ಆಪರೇಟಿವ್ ಬ್ಯಾಂಕಿನ 112ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ




**ಹೊಸಕೋಟೆ** : ದಿನಾಂಕ : 07/09/2025ರ ಭಾನುವಾರದಂದು ದಿ ಟೌನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಹೊಸಕೋಟೆ ಇದರ 2024–25ನೇ ಸಾಲಿನ 112ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಬ್ಯಾಂಕಿನ ಆಡಳಿತಾಧಿಕಾರಿಗಳಾದ ಶ್ರೀ ಕೆ.ವಿ. ಮಾಧವರೆಡ್ಡಿ ರವರ ಅಧ್ಯಕ್ಷತೆಯಲ್ಲಿ ಹೊಸಕೋಟೆ ಟೌನಿನ ಹೆಚ್.ಜೆ.ಎಸ್.ಎಸ್. ಕನ್‌ವೆನ್ಷನ್ ಹಾಲ್ ಆವರಣದಲ್ಲಿ ಏರ್ಪಡಿಸಲಾಗಿತ್ತು.

2024–25ನೇ ಸಾಲಿನಲ್ಲಿ ಬ್ಯಾಂಕು ರೂ.4.06 ಕೋಟಿಗಳ ನಿವ್ವಳ ಲಾಭ ಗಳಿಸಿದ್ದು, ಈ ನಿವ್ವಳ ಲಾಭವನ್ನು ಈ ವಾರ್ಷಿಕ ಮಹಾಸಭೆಯಲ್ಲಿ ವಿವಿಧ ನಿಧಿಗಳಿಗೆ ಹಂಚಿಕೆ ಮಾಡಲಾಯಿತು. ಷೇರುದಾರರಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿ ಬಂದ ನಂತರ ಶೇ.10.00ರಷ್ಟು ಡಿವಿಡೆಂಡ್ ಪಾವತಿಸಲು ಈ ವಾರ್ಷಿಕ ಮಹಾಸಭೆಯಲ್ಲಿ ತೀರ್ಮಾನಿಸಲಾಯಿತು.

ದಿನಾಂಕ : 31/03/2025ರ ಅಂತ್ಯಕ್ಕೆ ಬ್ಯಾಂಕಿನಲ್ಲಿ ರೂ.10.96 ಕೋಟಿ ಷೇರು ಬಂಡವಾಳ, ರೂ.47.56 ಕೋಟಿ ನಿಧಿಗಳು, ರೂ.283.01 ಕೋಟಿ ಠೇವಣಿಗಳು, ರೂ.146.93 ಕೋಟಿ ಸಾಲ ಮತ್ತು ಮುಂಗಡಗಳು ಮತ್ತು ರೂ.181.10 ಕೋಟಿ ಹೂಡಿಕೆಗಳು ಹಾಗೂ ರೂ.347.85 ಕೋಟಿಗಳ ದುಡಿಯುವ ಬಂಡವಾಳವಿದ್ದು, ನಿವ್ವಳ ಎನ್.ಪಿ.ಎ ಪ್ರಮಾಣವು ಶೂನ್ಯವಾಗಿರುತ್ತದೆ.

ಬ್ಯಾಂಕಿನ ಆಡಳಿತಾಧಿಕಾರಿಗಳು ಸಭೆಯಲ್ಲಿ ಮಾತನಾಡಿ ಬ್ಯಾಂಕಿನ ಈ ಒಂದು ಆರ್ಥಿಕ ಫಲಿತಾಂಶದ ಸಾಧನೆಗೆ ಸಹಕರಿಸಿದ ಮಾನ್ಯ ಸದಸ್ಯರಿಗೆ, ಠೇವಣಿದಾರರಿಗೆ ಹಾಗೂ ಗ್ರಾಹಕರಿಗೆ ಬ್ಯಾಂಕಿನ ಪರವಾಗಿ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಮಾನ್ಯ ಸದಸ್ಯರು ತಮ್ಮೆಲ್ಲಾ ಕೆಲಸಗಳನ್ನು ಬದಿಗೊತ್ತಿ ಈ ಮಹಾಸಭೆಗೆ ಆಗಮಿಸಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿರುತ್ತೀರಿ ಅದಕ್ಕಾಗಿ ಸದಸ್ಯರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸಿದರು.

ಈ ವಾರ್ಷಿಕ ಮಹಾಸಭೆಯಲ್ಲಿ ಬ್ಯಾಂಕಿನ ನಿಕಟಪೂರ್ವ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಎನ್. ಬಾಲಚಂದ್ರನ್, ಶ್ರೀ ಎ. ಅಫ್ಸರ್, ಶ್ರೀ ಬಿ. ನಾಗರಾಜ್, ಶ್ರೀಮತಿ ಬಿ. ವೆಂಕಟಲಕ್ಷ್ಮಿ, ಶ್ರೀ ಕೆ. ಕಿರಣ್‌ಕುಮಾರ್, ಶ್ರೀ ಹೆಚ್.ಜಿ. ಮೋಹನ್ ಕುಮಾರ್ ಹಾಗೂ ಹಿರಿಯ ಸದಸ್ಯರಾದ ಶ್ರೀ ಜಿ.ಎಸ್.ರಾಜಶೇಖರ್, ಶ್ರೀ ಹೆಚ್.ಎಂ. ಜಯಕುಮಾರ್, ಶ್ರೀ ಹೊ.ರಾ. ವೆಂಕಟೇಶ್, ಶ್ರೀ ಕೆಂಪಣ್ಣ, ಶ್ರೀ ಹೆಚ್.ಆರ್. ನಾರಾಯಣಸ್ವಾಮಿ (ನಾಣಿ), ಶ್ರೀ ಎನ್. ನಾಗರಾಜ್, ಶ್ರೀ ಶೌರತ್ ಉಲ್ಲಾ ಖಾನ್, ಶ್ರೀ ಹೆಚ್.ಎ. ನಟರಾಜ್, ಶ್ರೀ ಹೆಚ್.ಎ. ಜಯರಾಮ್, ಶ್ರೀ ಜಿ.ಎಸ್. ಮಂಜುನಾಥ್, ಶ್ರೀ ಎಸ್. ಮಂಜುನಾಥ್ (ಬಲ್ಬ್) ಶ್ರೀ ಹೆಚ್. ಎಸ್. ಗೋಪಾಲ, ಶ್ರೀ ಜಿ.ಯು. ವಿಷ್ಣು, ಶ್ರೀ ಕೆ. ಕಿರಣ್ ಮತ್ತು ಇತರರು ಭಾಗವಹಿಸಿದ್ದರು ಹಾಗೂ ಬ್ಯಾಂಕಿನ ಸಲಹೆಗಾರರು ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ನಿವೃತ್ತ ಅಧಿಕಾರಿಗಳಾದ ಶ್ರೀ ಪಿ.ಎಲ್. ಚೌಧರಿ ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳಾದ ಶ್ರೀ ನಾಗರಾಜ್ ರವರು ಅತಿಥಿಗಳಾಗಿ ಭಾಗವಹಿಸಿದ್ದರು.

ಈ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ಬ್ಯಾಂಕಿನ ನಿವೃತ್ತ ಅಧಿಕಾರಿಗಳಾದ ಶ್ರೀ ಶಂಕರಪ್ಪ, ಶ್ರೀ ಟಿ.ಎಲ್. ದೇವೇಂದ್ರಪ್ರಸಾದ್, ಶ್ರೀ ಎಸ್.ಬಿ. ಪಾಟೀಲ, ಶ್ರೀ ಎಂ. ವೆಂಕಟೇಶ್, ಶ್ರೀ ಹೆಚ್.ವಿ. ವರದರಾಜು, ಶ್ರೀ ಎಂ.ಆಂಜಿನಪ್ಪ ಮತ್ತು ಶ್ರೀಮತಿ ಹೆಚ್.ಬಿ. ನಿರ್ಮಲಕುಮಾರಿ ರವರನ್ನು ಸನ್ಮಾನಿಸಲಾಯಿತು.

ಬ್ಯಾಂಕಿನ ಪ್ರಭಾರ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎ.ನಾಗರಾಜ ರವರು ಸಭೆಯಲ್ಲಿ ವಿಷಯಗಳನ್ನು ಮಂಡಿಸಿದರು. ವ್ಯವಸ್ಥಾಪಕರಾದ ಶ್ರೀ ಕೆ.ಮಹೇಶ ರವರು ಸ್ವಾಗತ ಭಾಷಣ ನೆರವೇರಿಸಿದರು ಹಾಗೂ ಮತ್ತೊಬ್ಬ ವ್ಯವಸ್ಥಾಪಕರಾದ ಶ್ರೀ ಹೆಚ್. ಕೃಷ್ಣರಾವ್ ಸಲ್ಗರ್ ರವರು ವಂದನಾರ್ಪಣೆ ಮಾಡಿದರು.

# ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ : 119ನೇ ವಾರ್ಷಿಕ ಸರ್ವಸದಸ್ಯರ ಸಭೆ






**ಬೆಂಗಳೂರು:** ಕರ್ನಾಟಕ ರಾಜ್ಯದ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್ ಆದ ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಬೆಂಗಳೂರು–18, ದಿನಾಂಕ 06.04.1907 ರಲ್ಲಿ ಪ್ರಾರಂಭಗೊಂಡು ಅಂದಿನಿಂದಲೂ ಉತ್ತಮ ಬ್ಯಾಂಕಿಂಗ್ ಸೌಲಭ್ಯವನ್ನು ತನ್ನ ಗ್ರಾಹಕರಿಗೆ / ಸದಸ್ಯರುಗಳಿಗೆ ನೀಡುತ್ತಾ ಬಂದಿದೆ. ಬ್ಯಾಂಕು ಪ್ರಸ್ತುತ ಬೆಂಗಳೂರು ಮಹಾ ನಗರದ ವಿವಿಧ ಬಡಾವಣೆಗಳಲ್ಲಿ 20 ಶಾಖೆಗಳನ್ನು, ಸಾಂಸ್ಕೃತಿಕ ನಗರ ಮೈಸೂರಿನ ಕುವೆಂಪುನಗರದಲ್ಲಿ ಒಂದು ಶಾಖೆಯನ್ನು ಹಾಗೂ ರೇಷ್ಮೆ ನಗರ, ರಾಮನಗರ ಕೇಂದ್ರದಲ್ಲಿ ಒಂದು ಶಾಖೆಯನ್ನು ಹೊಂದಿದೆ. ಬ್ಯಾಂಕಿನ 119ನೇ ವಾರ್ಷಿಕ ಸರ್ವಸದಸ್ಯರ ಸಭೆಯು ದಿನಾಂಕ 14.09.2025 ರಂದು ಅಧ್ಯಕ್ಷರಾದ ಶ್ರೀ ಆವಲಹಳ್ಳಿ ಚಂದ್ರಪ್ಪ ಆರ್. ರವರ ಅಧ್ಯಕ್ಷತೆಯಲ್ಲಿ ನಡೆದು 2024–25 ರ ಸಾಲಿನ ಲೆಕ್ಕ ಪತ್ರಗಳನ್ನು ಅನುಮೋದಿಸುವುದರೊಂದಿಗೆ 2024–25 ರ ಸಾಲಿಗೆ ಸದಸ್ಯರುಗಳಿಗೆ ಶೇಕಡ 15 ರಂತೆ ಡಿವಿಡೆಂಡ್ ಘೋಷಿಸಿದೆ. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಮಂಜುನಾಥ ಪಿ. ಅವರು ಮಾತನಾಡಿ 2024–25 ರ ಸಾಲಾಂತ್ಯಕ್ಕೆ ಬ್ಯಾಂಕಿನ ಷೇರು ಮೊಬಲಗು ರೂ.95.95ಕೋಟಿ, ಸ್ವಂತ ನಿಧಿಗಳು ರೂ.525.49ಕೋಟಿ, ಠೇವಣಿಗಳು ರೂ.2158.89ಕೋಟಿ, ದುಡಿಯುವ ಬಂಡವಾಳ ರೂ.2780.33ಕೋಟಿ, ಸಾಲಗಳು ಮತ್ತು ಮುಂಗಡಗಳು ರೂ.1381.52ಕೋಟಿ, ಗುಂತಾಯಗಳು ರೂ.1232.35ಕೋಟಿ, ಒಟ್ಟು ವ್ಯವಹಾರ ರೂ.3540.41 ಕೋಟಿ, ನಿವ್ವಳ ಲಾಭ ರೂ.28.78ಕೋಟಿಗಳಾಗಿದೆ ಎಂದು ಮಾಹಿತಿ ನೀಡಿದರು.

ಸರ್ವಸದಸ್ಯರ ಸಭೆಯಲ್ಲಿ 50 ವರ್ಷಗಳಿಗೂ ಮೀರಿ ಬ್ಯಾಂಕಿನ ಸದಸ್ಯತ್ವದಲ್ಲಿ ಮುಂದುವರೆದ ನಾಲ್ವರು ಹಿರಿಯರನ್ನು ಸನ್ಮಾನಿಸಲಾಯಿತು. ಹಾಗೆಯೇ ಸದಸ್ಯರ 220 ಪ್ರತಿಭಾವಂತ ಮಕ್ಕಳು ಎಸ್.ಎಸ್.ಎಲ್.ಸಿ. ಮತ್ತು ನಂತರದ ಪರೀಕ್ಷೆಗಳಲ್ಲಿ ಉತ್ತಮ ಅಂಕ ಪಡೆದು ಉತ್ತೀರ್ಣರಾದವರನ್ನು ಸನ್ಮಾನಿಸಲಾಯಿತು.



# ಶಿರಸಿ ಅರ್ಬನ್ ಸಹಕಾರಿ ಬ್ಯಾಂಕಿನ ವಾರ್ಷಿಕ ಸರ್ವಸಾಧಾರಣ ಸಭೆ

## ರೂ. 2300 ಕೋಟಿಗೂ ಮಿಕ್ಕಿದ ದಾಖಲೆಯ ವ್ಯವಹಾರದ ಸಾಧನೆ

## ವಾರ್ಷಿಕ ಸಭೆಯಲ್ಲಿ ಸದಸ್ಯರಿಂದ ಶ್ಲಾಘನೆ – ಹಿರಿಯ ಸದಸ್ಯರಿಗೆ ಸನ್ಮಾನ



**ಶಿರಸಿ :** ರಾಜ್ಯದ ಪ್ರತಿಷ್ಠಿತ ಸಹಕಾರಿ ಬ್ಯಾಂಕಾದ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕು ತನ್ನ 2024–25ನೇ ಸಾಲಿನ ವಾರ್ಷಿಕ ಸರ್ವಸಾಧಾರಣ ಸಭೆಯನ್ನು ದಿನಾಂಕ 14–09–2025 ರಂದು ಶಿರಸಿಯ ರಾಯರಪೇಟೆಯ ವಿದ್ಯಾಧಿರಾಜ ಕಲಾಕ್ಷೇತ್ರದಲ್ಲಿ ಯಶಸ್ವಿಯಾಗಿ ನೆರವೇರಿಸಿತು.

ಬ್ಯಾಂಕಿನ ಪ್ರಗತಿಯ ವಿವರಣೆಯನ್ನು ಅಧ್ಯಕ್ಷರಾದ ಶ್ರೀ ಜಯದೇವ ಯು. ನಿಲೇಕಣಿಯವರು ವಾರ್ಷಿಕ ಸರ್ವಸಾಧಾರಣ ಸಭೆಯನ್ನುದ್ದೇಶಿಸಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿದರು. ಬ್ಯಾಂಕು ಒಟ್ಟು ವ್ಯವಹಾರವನ್ನು ರೂ.2361 ಕೋಟಿಗೆ ದಾಖಲಿಸಿ 2024–25ನೇ ಸಾಲಿನಲ್ಲಿ ಹೊಸ ಮೈಲಿಗಲ್ಲು ದಾಟಿರುವುದನ್ನು ಸದಸ್ಯರು ಸಭೆಯಲ್ಲಿ ಶ್ಲಾಘಿಸಿದರು.

ಬ್ಯಾಂಕು ಆರ್ಥಿಕ ವರ್ಷದಲ್ಲಿ ತನ್ನ ಒಟ್ಟು ಠೇವಣಿಯನ್ನು ರೂ. 1377.97 ಕೋಟಿಗಳಿಗೆ, ದುಡಿಯುವ ಬಂಡವಾಳವನ್ನು ರೂ. 1605.01 ಕೋಟಿಗಳಿಗೆ ಹೆಚ್ಚಿಸುವುದರೊಂದಿಗೆ ರೂ. 11.07 ಕೋಟಿ ನಿವ್ವಳ ಲಾಭವನ್ನು ದಾಖಲಿಸಿ ತನ್ನ ಸಾಧನೆಯನ್ನು ಮುಂದುವರಿಸಿಕೊಂಡು ಬಂದಿದೆ. ಮುಂದುವರೆದು ಅವರು ಬ್ಯಾಂಕಿನ ಸದಸ್ಯರ ಸಂಖ್ಯೆ 49,416 ದಾಟಿದ್ದು, ಸಂದಾಯಿತ ಶೇರು ಬಂಡವಾಳ ರೂ.41.32 ಕೋಟಿ ತಲುಪಿದ್ದು, ಕಳೆದ ವರ್ಷದ ರೂ. 116.82 ಕೋಟಿ ಆದಾಯವನ್ನು ರೂ. 134.01 ಕೋಟಿಗಳಿಗೆ ಬ್ಯಾಂಕು ಹೆಚ್ಚಿಸಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು. ಬ್ಯಾಂಕು ಕಳೆದ 5 ವರ್ಷಗಳಲ್ಲಿ ತನ್ನ ವ್ಯವಹಾರವನ್ನು ರೂ.1,361 ಕೋಟಿಗಳಿಂದ ರೂ.2,361 ಕೋಟಿಗಳಿಗೆ ಅಭಿವೃದ್ಧಿಗೊಳಿಸಿರುವುದು ಬ್ಯಾಂಕು ಸುದೃಢವಾಗಿ ಪ್ರಗತಿಯತ್ತ ಸಾಗುವ ಸಂಕೇತವಾಗಿದೆ ಎಂಬ ವಿಷಯವನ್ನು ಸಭೆಗೆ ತಿಳಿಸಿದರು.

ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ಆರತಿ ಎಸ್. ಶೆಟ್ಟರ್‌ರವರು ಈ ಸಂದರ್ಭದಲ್ಲಿ ಬ್ಯಾಂಕಿನ ಪ್ರಗತಿಯ ಕುರಿತು ಸ್ಥೂಲ ಚಿತ್ರಣವನ್ನು ಸಭೆಗೆ ನೀಡಿದರು. ಈ ಸಂದರ್ಭದಲ್ಲಿ ಉತ್ಕೃಷ್ಟ ಸಾಧನೆ ಮಾಡಿದ ಬ್ಯಾಂಕಿನ ಬನವಾಸಿ ಶಾಖಾ ವ್ಯವಸ್ಥಾಪಕರು ಹಾಗೂ ಸಿಬ್ಬಂದಿಗಳಿಗೆ ಅವರ ಈ ಸಾಧನೆಗಾಗಿ ಸಭೆಯಲ್ಲಿ ಅಭಿನಂದಿಸಿ ಪ್ರಶಸ್ತಿ ಪತ್ರವನ್ನು ನೀಡಲಾಯಿತು. ಅದೇ ರೀತಿ ಬ್ಯಾಂಕಿನಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಸಿಬ್ಬಂದಿಗಳಾದ ಶ್ರೀ ದೀಪಕ ಎಸ್. ಪ್ರಭು, ಶ್ರೀ ಸುರೇಶ ಜಿ. ಶೇಟ್, ಶ್ರೀ ಗಜಾನನ ಎಚ್. ಐಗಳ ಹಾಗೂ ಶ್ರೀ ಚಂದ್ರಕಾಂತ ಕೆ. ಗೌಡ ರವರನ್ನು ಸಭೆಯಲ್ಲಿ ಉಪಸ್ಥಿತರಿದ್ದ ಆಡಳಿತ ಮಂಡಳಿಯ ಸದಸ್ಯರು ಬ್ಯಾಂಕಿನ ಹಾಗೂ ಶೇರುದಾರ ಸದಸ್ಯರ ಪರವಾಗಿ ಗೌರವಿಸಿ ಸನ್ಮಾನಿಸಿದರು. ವಾರ್ಷಿಕ ಸರ್ವಸಾಧಾರಣ ಸಭೆಯ ಅಂಗವಾಗಿ ಪ್ರತಿ ವರ್ಷದಂತೆ ಬ್ಯಾಂಕಿನ ಹಿರಿಯ ಸದಸ್ಯರಾದ ಶ್ರೀ ವಸಂತ ನಾಗು ನೇತ್ರೆಕರ್, ಶ್ರೀಮತಿ ರಾಧಾಬಾಯಿ ಗೋಪಾಲಕೃಷ್ಣ ಮೆಣಸಿ, ಶ್ರೀ ದಾಮೋದರ ವಾಸುದೇವ ಭಟ್, ಶ್ರೀ ಪ್ರಕಾಶ ಷಣ್ಮುಖ ಬಂಗ್ಲೆ, ಶ್ರೀ ವಾಮನ ಗಜಾನನ ನಾಡಿಗ ಹಾಗೂ ಶ್ರೀ ಮಹಾಬಲೇಶ್ವರ ವೆಂಕಟ್ರಮಣ ಭಟ್, ಕಕ್ಕೋಡ ರವರನ್ನು ಬ್ಯಾಂಕಿನ ಅಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿಯ ಸದಸ್ಯರು ಸನ್ಮಾನಿಸಿ ಗೌರವಿಸಿದರು.

ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ, 25 ವರ್ಷಗಳ ಖಾಯಂ ಸೇವೆ ಸಲ್ಲಿಸಿ ಕಾರ್ಯ ನಿರ್ವಹಿಸುತ್ತಿರುವ ಬ್ಯಾಂಕಿನ 06 ಸಿಬ್ಬಂದಿಗಳನ್ನು ಅವರು ತೋರಿದ ನಿಷ್ಠಾಪೂರ್ಣ ಕಾರ್ಯಸಾಧನೆಗಾಗಿ ಸನ್ಮಾನಿಸಲಾಯಿತು. ಈ ಎಲ್ಲಾ ಸಿಬ್ಬಂದಿಗಳಿಗೆ ಪ್ರಶಂಸಾ ಪತ್ರ, ಫಲಕ ಹಾಗೂ ತಲಾ ರೂ.10,000–00 ನಗದು ಬಹುಮಾನ ನೀಡಲಾಯಿತು. ಅದೇ ರೀತಿ ಬ್ಯಾಂಕಿನ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರೋತ್ಸಾಹ ನೀಡುವ ಕುರಿತು ಕಳೆದ 2024–25ನೇ ಸಾಲಿನಲ್ಲಿ ನಡೆದ S.S.L.C, P.U.C ದ್ವಿತೀಯ ವರ್ಷದ ಪರೀಕ್ಷೆಗಳಲ್ಲಿ ಶೇಕಡಾ 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದ ಹಾಗೂ ಪದವಿ/ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ವಿಶ್ವವಿದ್ಯಾಲಯಕ್ಕೆ ರ‍್ಯಾಂಕ್ ಪಡೆದ ಬ್ಯಾಂಕಿನ ಸದಸ್ಯರ 77 ಮಕ್ಕಳಿಗೆ ವಾರ್ಷಿಕ ಸರ್ವಸಾಧಾರಣ ಸಭೆಯ ಅಂಗವಾಗಿ ರೂ. 3,08,000=00 ಮೊತ್ತದ ಪ್ರತಿಭಾ ಪುರಸ್ಕಾರ ನೀಡುವುದರೊಂದಿಗೆ ಗೌರವಿಸಲಾಯಿತು.

120 ವರ್ಷಗಳ ಇತಿಹಾಸ ಹೊಂದಿರುವ ಬ್ಯಾಂಕು, ಸಹಕಾರ ತತ್ವದಡಿ ಶತಮಾನಗಳಷ್ಟು ಹಿರಿಯ ಸಂಪ್ರದಾಯವನ್ನು ಹೊಂದಿದ್ದು, ಭಾರತದ ಭೂಪಟದಲ್ಲಿ ಅತ್ಯುನ್ನತ ಸಹಕಾರಿ ಬ್ಯಾಂಕು ಎಂದು ಗುರುತಿಸುವ ಸಂಕಲ್ಪವನ್ನು ಹೊಂದಿರುತ್ತದೆ. ಬ್ಯಾಂಕಿನ ಈ ಎಲ್ಲ ಸಾಧನೆಗಳಿಗೆ ಗೌರವಾನ್ವಿತ ಸದಸ್ಯರ, ಗ್ರಾಹಕರ ಅಭೂತಪೂರ್ವ ವಿಶ್ವಾಸ, ಆಡಳಿತ ಮಂಡಳಿಯ ಸೂಕ್ತ ಮಾರ್ಗದರ್ಶನ ಹಾಗೂ ಸಿಬ್ಬಂದಿಗಳ ನಿಷ್ಠಾಪೂರ್ಣ ಕರ್ತವ್ಯ ನಿರ್ವಹಣೆಯೇ ಕಾರಣವೆಂದು ಅಧ್ಯಕ್ಷರಾದ ಶ್ರೀ ಜಯದೇವ ಯು. ನಿಲೇಕಣಿ, ಉಪಾಧ್ಯಕ್ಷರಾದ ಶ್ರೀ ಸಂತೋಷ ಎಸ್. ಪಂಡಿತ ಹಾಗೂ ನಿರ್ದೇಶಕ ಮಂಡಳಿಯ ಸದಸ್ಯರು ಸಭೆಯಲ್ಲಿ ತಿಳಿಸಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಬ್ಯಾಂಕಿನ ನಿರ್ದೇಶಕರಾದ ಶ್ರೀ ಸದಾನಂದ ಎಮ್. ನಾಯ್ಕ ರವರು ಆಭಾರ ಮನ್ನಣೆ ನಿರ್ವಹಿಸಿದರು.

# ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್

## ರೂ. 126.26 ಕೋಟಿ ವ್ಯವಹಾರ, ರೂ. 1.04 ಕೋಟಿ ನಿವ್ವಳ ಲಾಭ

## ಹಿರಿಯ ಸದಸ್ಯರಿಗೆ ಸನ್ಮಾನ – ವಿದ್ಯಾರ್ಥಿ ವೇತನ ಪ್ರತಿಭಾ ಪುರಸ್ಕಾರ ವಿತರಣೆ



**ಪುತ್ತೂರು** : ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್ ಗ್ರಾಹಕರಿಗೆ ಪ್ರಯೋಜನ ಆಗುವ ರೀತಿಯಲ್ಲಿ ಹಲವು ಹೊಸತನಗಳೊಂದಿಗೆ ಸಂಪೂರ್ಣ ಡಿಜಿಟಲೀಕರಣವಾಗುತ್ತಿದ್ದು, ಇದರ ಪ್ರಮುಖ ನಾಲ್ಕು ಯೋಜನೆಗಳನ್ನು ಸೆ.14ರಂದು ನಡೆದ 116ನೇ ವರ್ಷದ ಮಹಾಸಭೆಯಲ್ಲಿ ಉದ್ಘಾಟಿಸಲಾಯಿತು.

ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್ ಅಧ್ಯಕ್ಷ ಕಿಶೋರ್ ಕೊಳತ್ತಾಯ ಎನ್ ಅವರ ಅಧ್ಯಕ್ಷತೆಯಲ್ಲಿ ಮಹಾಸಭೆ ನಡೆಯಿತು.

ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ 2024–25ನೇ ಸಾಲಿನಲ್ಲಿ ನಮ್ಮ ಬ್ಯಾಂಕ್ ಇತಿಹಾಸದಲ್ಲಿ ಒಂದು ಹೊಸ ಮೈಲುಗಲ್ಲನ್ನು ಸಾಧಿಸಿದೆ. ವ್ಯವಹಾರದಲ್ಲಿ ಗಣನೀಯ ಹೆಚ್ಚಳ ಸಾಧಿಸಿದ್ದು, ಒಟ್ಟು ಠೇವಣಿ ರೂ. 74.87 ಕೋಟಿ, ಒಟ್ಟು ಸಾಲ ರೂ. 51.39 ಕೋಟಿಗಳಾಗಿದ್ದು, ಒಟ್ಟು ವ್ಯವಹಾರ ರೂ. 126.26 ಕೋಟಿ ದಾಟಿದೆ. ಈ ವರ್ಷದ ನಿವ್ವಳ ಲಾಭ ರೂ. 1.04 ಕೋಟಿ ಆಗಿದೆ ಎಂದು ಹೇಳಿದ ಅವರು ಶೇ. 11 ಡಿವಿಡೆಂಟ್ ನೀಡುವುದಾಗಿ ಘೋಷಣೆ ಮಾಡಿದರು. ಇದೇ ಸಂದರ್ಭ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಉದ್ಘಾಟಿಸಲಾಗುವುದು ಎಂದರು. ವರ್ಷದ ಆದಿಯಲ್ಲಿ 9164 ಸದಸ್ಯರಿದ್ದು, 620 ಹೊಸ ಸದಸ್ಯರ ಸೇರ್ಪಡೆಯಾಗಿದ್ದು, ವರ್ಷದಲ್ಲಿ 162 ಮಂದಿ ಸದಸ್ಯತನವನ್ನು ತ್ಯಜಿಸಿದ್ದು, ವರ್ಷಾಂತ್ಯದಲ್ಲಿ 9626 ಸದಸ್ಯರಿದ್ದಾರೆ. 1184 ಸಹ ಸದಸ್ಯರಿದ್ದಾರೆ. ಈ ಬಾರಿಯೂ ಬ್ಯಾಂಕ್ ಎ ತರಗತಿ ಪಡೆದಿದೆ ಎಂದು ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ. ಶೇಖರ್ ಶೆಟ್ಟಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಹಿರಿಯ ಸದಸ್ಯರಿಗೆ ಸನ್ಮಾನ ಹಾಗೂ ವಿದ್ಯಾರ್ಥಿ ವೇತನ ಪ್ರತಿಭಾ ಪುರಸ್ಕಾರ ನೀಡಲಾಯಿತು. ನಿರ್ದೇಶಕರಾದ ಕಿರಣ್ ಕುಮಾರ್ ರೈ, ರಾಜು ಶೆಟ್ಟಿ, ರಾಮಚಂದ್ರ ಕಾಮತ್, ಸುಜೀಂದ್ರ ಪ್ರಭು, ಮಲ್ಲೇಶ್ ಕುಮಾರ್, ಶ್ರೀಧರ್ ಪಟ್ಲ, ಗಣೇಶ್ ಕೌಕ್ರಾಡಿ, ಹರೀಶ್ ಬಿಜತ್ರೆ, ಸೀಮಾ ಎಂ.ಎ, ವೀಣಾ, ಮೇ। ರಾವ್ ಆಂಡ್ ಎಮ್ಮಾರ್ ಕಂಪೆನಿಯ ಲೆಕ್ಕಪರಿಶೋದಕ ತ್ವೇಜ್, ಚಾರ್ಟಡ್ ಅಕೌಂಟೆಂಟ್ ಕೆ.ಎಸ್. ಪ್ರಸಾದ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ತನ್ವಿ ಶೆಣೈ ಪ್ರಾರ್ಥಿಸಿದರು, ಬ್ಯಾಂಕ್‌ನ ಉಪಾಧ್ಯಕ್ಷ ಶ್ರೀಧರ್ ಗೌಡ ಕೆ ಸ್ವಾಗತಿಸಿದರು. ನಿರ್ದೇಶಕ ಚಂದ್ರಶೇಖರ್ ರಾವ್ ಬಪ್ಪಳಿಗೆ ವಂದಿಸಿದರು. ವಿಟ್ಲ ಶಾಖೆಯ ಪ್ರಬಂಧಕಿ ಜ್ಯೋತಿ ಎನ್ ಎಸ್ ಕಾರ್ಯಕ್ರಮ ನಿರೂಪಿಸಿದರು. ಸಹಾಯಕ ಪ್ರಬಂಧಕ ಚೇತನ್ ಯು.ಎನ್, ಶಾಖಾ ಪ್ರಬಂಧಕ ಚಿದಂಬರ ಸಹಿತ ಸಿಬ್ಬಂದಿಗಳು ವಿವಿಧ ಕಾರ್ಯಕ್ರಮ ನಿರ್ವಹಿಸಿದರು. ಮಾಜಿ ಶಾಸಕ ಸಂಜೀವ ಮಠಂದೂರು, ಹಿರಿಯರಾದ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಎನ್.ಸುಬ್ರಹ್ಮಣ ಕೊಳತ್ತಾಯ ಸಹಿತ ಹಲವಾರು ಸಾವಿರಾರು ಮಂದಿ ಸದಸ್ಯರು ಮಹಾಸಭೆಯಲ್ಲಿ ಪಾಲ್ಗೊಂಡು ಸಲಹೆ ಸೂಚನೆ ನೀಡಿದರು.





# ನಿಮ್ಮ ಪ್ರಶ್ನೆ ನಮ್ಮ ಉತ್ತರ





▶▶ **ಸುಧಾಕರ್ ಭಟ್**, ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನ ಆಡಳಿತ ಮಂಡಳಿ ಬ್ಯಾಂಕಿನ ಸಿಬ್ಬಂದಿಗಳಿಗೆ ಬ್ಯಾಂಕಿನ ವತಿಯಿಂದ ಆರೋಗ್ಯ ವಿಮೆ (Group Health Insurance) ಸೌಲಭ್ಯವನ್ನು ನೀಡಲು ತೀರ್ಮಾನಿಸಿದ್ದು, ಈ ಸೌಲಭ್ಯವನ್ನು ಬ್ಯಾಂಕಿನ ನಿರ್ದೇಶಕರುಗಳಿಗೆ ನೀಡಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಧಾರವಾಡ.**

**ಉತ್ತರ :** ದಿನಾಂಕ : ಏಪ್ರಿಲ್ 1, 2025ರ ರಿಜರ್ವ್ ಬ್ಯಾಂಕು ಆಡಳಿತ ಮಂಡಳಿ ಬಗ್ಗೆ ನೀಡಿದ ಮಾಸ್ಟರ್ ಡೈರೆಕ್ಷನ್‌ನಲ್ಲಿ ನಿರ್ದೇಶಕರುಗಳಿಗೆ ನೀಡಬಹುದಾದ ಶುಲ್ಕಗಳು ಮತ್ತು ಭತ್ಯೆಗಳ (Fees and Allowances) ಬಗ್ಗೆ ಉಲ್ಲೇಖ ಇದೆ. ನಿರ್ದೇಶಕರಿಗೆ ನೀಡಿದ ಶುಲ್ಕಗಳು ಮತ್ತು ಭತ್ಯೆಗಳನ್ನು ನಿರ್ದೇಶಕರಿಗೆ ವಾಸ್ತವವಾಗಿ ಪಾವತಿಸಿದ ಮೊತ್ತಗಳು ಮತ್ತು ಸಭೆಗಳಿಗೆ ಹಾಜರಾಗಲು ಅವರ ಪರವಾಗಿ ಖರ್ಚು ಮಾಡಿದ ಮೊತ್ತಗಳನ್ನು ಒಳಗೊಂಡಿದೆ ಎಂದು ಸ್ಪಷ್ಟಪಡಿಸುತ್ತದೆ. ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಗಳಲ್ಲಿ ಅಥವಾ ಸಹಕಾರ ಸಂಘಗಳ ಕಾಯ್ದೆಯಲ್ಲಿ ನಿರ್ದೇಶಕರುಗಳಿಗೆ ನೀಡಬಹುದಾದ ಆರೋಗ್ಯ ವಿಮೆಯ ಬಗ್ಗೆ ಸ್ಪಷ್ಟವಾದ ಉಲ್ಲೇಖ ಇಲ್ಲ.

**02. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 16ರ ಪ್ರಕಾರ ಯಾವುದೇ ಇತರ ಸಹಕಾರ ಸಂಘವು ನಮ್ಮ ಬ್ಯಾಂಕಿನ ಸದಸ್ಯನಾಗಬಹುದು ಎಂತ ಇದೆ. ಸಹಕಾರಿ ಸಂಘಗಳಿಗೆ ಅನ್ವಯಿಸುವ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949ರ ಪ್ರಕಾರ ವಿಶೇಷವಾಗಿ ಸಹಕಾರಿ ಬ್ಯಾಂಕ್ ರಾಜ್ಯ ಸರ್ಕಾರವು ಒದಗಿಸುವ ನಿಧಿಯಿಂದ ಸಂಘದ ಷೇರುಬಂಡವಾಳಕ್ಕೆ ಚಂದಾದಾರರಾಗಿದ್ದರೆ ಒಂದು ಸಹಕಾರಿ ಸಂಘವನ್ನು ಸಹಕಾರಿ ಬ್ಯಾಂಕಿನ ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದು.**

**ಸಹಕಾರ ಸಂಘಗಳ ಕಾಯ್ದೆ1959ರ ಅಡಿಯಲ್ಲಿ ನೋಂದಾಯಿತವಾದ ಸಹಕಾರ ಸಂಘಗಳು ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಅಡಿಯಲ್ಲಿ ನೋಂದಾಯಿತವಾದ ಸೌಹಾರ್ದ ಸಹಕಾರಿ ಸಂಸ್ಥೆಗಳು ಅರ್ಬನ ಬ್ಯಾಂಕುಗಳಲ್ಲಿ ಸದಸ್ಯರಾಗಬಹುದೇ?**

**ರಿಜರ್ವ್ ಬ್ಯಾಂಕು ತನ್ನ ದಿನಾಂಕ : 10.07.2025ರ Press Release 2025–26/688 ಪ್ರಕಾರ ಸೋಲಾಪುರ ಜನತಾ ಸಹಕಾರಿ ಬ್ಯಾಂಕ್‌ಗೆ ಆ ಬ್ಯಾಂಕಿನ ಉಪನಿಬಂಧನೆಗಳು ಬ್ಯಾಂಕಿಂಗ್ ರೆಗ್ಯುಲೇಶನ್ ಕಾಯ್ದೆಯ ಪ್ರಾವಧಾನಗಳಿಗೆ ತದ್ವಿರುದ್ಧವಾಗಿ ಸಹಕಾರ ಸಂಘವನ್ನು 'ಸದಸ್ಯ'ನನ್ನಾಗಿ ಸೇರ್ಪಡಿಸಿಕೊಳ್ಳುವ ಅನುವು ಹೊಂದಿದೆ ಎಂಬ ಕಾರಣಕ್ಕಾಗಿ ದಂಡವನ್ನು ವಿಧಿಸಿದೆ. ಈ ಕುರಿತು ತಮ್ಮ ಅಭಿಪ್ರಾಯ ತಿಳಿಸಬೇಕಾಗಿ ವಿನಂತಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಉತ್ತರ ಕನ್ನಡ ಜಿಲ್ಲೆ.**

**ಉತ್ತರ :** ಸಹಕಾರಿ ಕಾಯ್ದೆ ರೀತ್ಯ ನೋಂದಾಯಿಸಲ್ಪಟ್ಟಿರುವ ಯಾವುದೇ ಸಹಕಾರ ಸಂಘವು ಬ್ಯಾಂಕಿನ ಸದಸ್ಯತ್ವ ಪಡೆಯಲು ಅರ್ಹವಾಗಿರತಕ್ಕದ್ದಲ್ಲ ಎಂಬ ಅಂಶವನ್ನು ಮಾದರಿ ಉಪವಿಧಿಯ ಸಂಖ್ಯೆ 16(2)ರಲ್ಲಿ ಸ್ಪಷ್ಟಪಡಿಸಲಾಗಿದೆ. ನಿಮ್ಮ ಉಪವಿಧಿಯಲ್ಲಿ ಕೂಡ ಈ ಅಂಶವನ್ನು ನಮೂದಿಸಿರುತ್ತದೆ. ಇದನ್ನು ಖಾತರಿಪಡಿಸಿದ ನಂತರವೇ ಭಾರತೀಯ ರಿಜರ್ವ್ ಬ್ಯಾಂಕು ನಿಮಗೆ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಕಲಂ 56(5)(ಸಿಸಿv) ಅಡಿಯಲ್ಲಿ ಬ್ಯಾಂಕಿಂಗ್ ಲೈಸೆನ್ಸ್ ನೀಡಿದೆ.

ಈ ಕಾಯ್ದೆಯ ಮೇಲೆ ತಿಳಿಸಿದ ಕಲಂ ನಂತರ ಬರುವ ಪರಂತುಕವು ಸರ್ಕಾರದಿಂದ ನಿಧಿ ಪಡೆದ ಸಂದರ್ಭದಲ್ಲಿ ಮಾತ್ರ ಅನ್ವಯಿಸುತ್ತದೆ. ಆದ್ದರಿಂದ, ಪಟ್ಟಣ ಸಹಕಾರ ಬ್ಯಾಂಕು ಸಹಕಾರ ಸಂಘ / ಸೌಹಾರ್ದ ಸಂಘವನ್ನು ಸದಸ್ಯನಾಗಿ ಸ್ವೀಕರಿಸಿದಲ್ಲಿ ರಿಜರ್ವ್ ಬ್ಯಾಂಕಿನ ದಂಡಕ್ಕೆ ಪಾತ್ರರಾಗಬೇಕಾಗುತ್ತದೆ.

## ಧನಶ್ರೀ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ : 35ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ



**ಅಥಣಿ :** ಧನಶ್ರೀ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ ಲಿ., ಅಥಣಿಯ 35ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಶನಿವಾರ ದಿ.06/09/2025 ರಂದು ಬ್ಯಾಂಕಿನ ಅಧ್ಯಕ್ಷರಾದ ಹಿಮಾನ್‌ಶು ರಮೇಶ ಭಾಟೆ ಯವರು ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರೊಂದಿಗೆ ಸಸಿಗೆ ನೀರು ಎರೆಯುವುದರ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಸಂಜೀವ ವ್ಹಿ ಕುಲಕರ್ಣಿ ನಿರ್ದೇಶಕರುಗಳಾದ ಶ್ರೀ ಅನಿಲ ಬಿ. ದೇಶಪಾಂಡೆ, ಅಚ್ಯುತ ಎ ದೇಶಪಾಂಡೆ, ಮಾಧವ ವ್ಹಿ ಜೋಶಿ, ಮಹೇಶ ವಾಯ್ ಗುಂಡಾ, ಅಜಿತ ಬಿ ಇನಾಮದಾರ, ಸಾಯಿರಾಜ ಡಿ ಉಭಾಳೆ, ರಮೇಶ ಜೆ ವನಾರಸೆ, ಶ್ರೀಮತಿ ಶ್ವೇತಾ ಎಲ್ ಜೆರೆ, ಶ್ರೀಮತಿ ಆಶಾ ಎ ಫಡಕೆ, ಶ್ರೀ ಶೇಖರ ಪಿ ಸೌದಾಗರ, ಯಶವಂತ ಎಲ್ ಬುರುಡ, ವಿಶೇಷ ಆಹ್ವಾನಿತ ನಿರ್ದೇಶಕರಾದ ಪ್ರವೀಣ ಎಸ್ ಕುಲಕರ್ಣಿ ಹಾಗೂ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ವೀರಭದ್ರ ಆರ್ ಬಡಿಗೇರ ಮತ್ತು ಉಪವ್ಯವಸ್ಥಾಪಕ ನರಸಿಂಹ ಕೆ ಕುಲಕರ್ಣಿ ಇವರುಗಳು ಉಪಸ್ಥಿತರಿದ್ದರು.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ರಾಜಸ್ಥಾನದ ಭಿಲ್ವಾರಾ ಜಿಲ್ಲೆಯ ಜಂಗಿ ಚೌಕ್‌ನ 67 ವರ್ಷದ ಶಾಂತಿ ದೇವಿ ನಿಧನರಾಗಿದ್ದರು. ಅವರ ಅಂತ್ಯಕ್ರಿಯೆ ನಡೆಸಲು ಯಾರೂ ಇಲ್ಲದಿರುವ ಕಾರಣ ಸ್ಥಳೀಯ ಮೂವತ್ತು ವರ್ಷದ ಮುಸ್ಲಿಂ ಯುವಕ ಅಸ್ಗರ್ ಅಲಿ ಮಗನಂತೆ ಮುಂದೆ ನಿಂತು ಹಿಂದೂ ವಿಧಿವಿಧಾನಗಳೊಂದಿಗೆ ಅಂತ್ಯಕ್ರಿಯೆಯನ್ನು ನೆರವೇರಿಸಿದರು.
- ಸದಾ ಕೋಮು ಗಲಭೆಗಳಿಂದ ಸುದ್ದಿಯಾಗುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ವಧರ್ಮ ಸಾಮರಸ್ಯವನ್ನು ಉತ್ತೇಜಿಸುವ ಸಲುವಾಗಿ, ಅಲ್ಲಿನ ಕುದ್ರೋಳಿ ಜಾಮಿಯಾ ಮಸೀದಿಯು ಸಾರ್ವಜನಿಕರಿಗೆ ಮಸೀದಿ ದರ್ಶನ ಕಾರ್ಯಕ್ರಮವನ್ನು ನಡೆಸುವ ಮೂಲಕ ಸರ್ವಧರ್ಮೀಯರನ್ನು ಒಟ್ಟುಗೂಡಿಸಿ ಗಮನ ಸೆಳೆಯಿತು.
- ವಿಶೇಷ ಚೇತನರಾದ ಕರ್ನಾಟಕದ ವೀಲ್‌ಚೇರ್ ಟೆನಿಸ್ ಆಟಗಾರ್ತಿಯರಾದ ಪ್ರತಿಮಾ ರಾವ್ ಮತ್ತು ಶಿಲ್ಪಾ ಪುಟ್ಟರಾಜು ಅವರುಗಳು ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಮೂರು ಪ್ರಮುಖ ಅಂತರರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ. ಇಬ್ಬರೂ ಸಿಂಗಲ್ಸ್‌ನಲ್ಲಿ ಆಟವಾಡಿ ನಂತರ ಡಬಲ್ ಪ್ರಶಸ್ತಿಗೆ ಜೊತೆಯಾಗಿ ಆಡಲಿದ್ದಾರೆ.
- 2023ನೇ ಸಾಲಿನ ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಬಹುಭಾಷಾ ಮಲಯಾಳಂ ಚಿತ್ರನಟ ಮೋಹನ್‌ಲಾಲ್ ಅವರಿಗೆ ಘೋಷಿಸಲಾಗಿದೆ. ಸೆಪ್ಟೆಂಬರ್ 23ರಂದು ನಡೆಯುವ 71ನೇ ರಾಷ್ಟ್ರ ಚಲಚನಚಿತ್ರ ಪ್ರಸಸ್ತಿ ಪ್ರದಾನ ಸಭಾರಂಭದಲ್ಲಿ ಅವರಿಗೆ ಈ ಪ್ರಶಸ್ತಿ ಪ್ರಧಾನ ಮಾಡಲಾಗುತ್ತದೆ.
- ಕೇರಳದ ಪಾಲಕ್ಕಾಡ್ ಜಿಲ್ಲೆಯಲ್ಲಿರುವ ಎಲೆವಾಂಚೇರಿ ಗ್ರಾಮದ 300 ಕುಟುಂಬಗಳು ಟೊಮ್ಯಾಟೋ, ಬೀನ್ಸ್, ಕ್ಯಾರೆಟ್‌ಗಳಿಂದ ಹಿಡಿದು ಸುಮಾರು 30 ವಿವಿಧ ತರಕಾರಿಗಳನ್ನು ಬೆಳೆಯುವ ಮೂಲಕ ಪ್ರತಿ ವರ್ಷ 5,000 ಟನ್ ಉತ್ಪನ್ನ ಬೆಳೆಯುವ ಮೂಲಕ ವಾರ್ಷಿಕ 16 ಕೋಟಿ ರೂಪಾಯಿ ವ್ಯವಹಾರವನ್ನು ನಡೆಸುತ್ತಾರೆ.

## ಓದುಗರ ಅನಿಸಿಕೆ...




**ಧಕ್ಷ ಪ್ರಾಮಾಣಿಕ ಸೇವೆಯೇ ಕಾರಣ :** ನಮ್ಮ ರಾಜ್ಯದ ಅನೇಕ ಪಟ್ಟಣ ಸಹಕಾರ ಬ್ಯಾಂಕುಗಳು ನೂರು ವರ್ಷಗಳ ಉಜ್ವಲ ಇತಿಹಾಸ ಹೊಂದಿವೆ. ತಮ್ಮ ಊರಿನ, ಜಿಲ್ಲೆಯ ಎಲ್ಲ ವರ್ಗದ ಲಕ್ಷಾಂತರ ಜನರಿಗೆ ಆರ್ಥಿಕ ಸಹಾಯ ನೀಡಿ ಬೆಳೆದು ಬಂದಿವೆ. ಇದಕ್ಕೆ ಕಾರಣ ಆಯಾ ಬ್ಯಾಂಕುಗಳ ಅಧ್ಯಕ್ಷ – ಉಪಾಧ್ಯಕ್ಷರ, ಆಡಳಿತ ಮಂಡಳಿ ಸದಸ್ಯರ, ಸಿಬ್ಬಂದಿ ವರ್ಗದ ಧಕ್ಷ ಪ್ರಾಮಾಣಿಕ ಸೇವೆಯೇ ಕಾರಣವಾಗಿದೆ ಎಂದು ಹೇಳಬಹುದು.

**▸▸ ಆರೂರು ಶಶಿಧರ ಭಟ್, ವಿಟ್ಲ**

**ಅಭಿನಂದನೆಗಳು :** ನಮ್ಮ ದೇಶದ 15ನೇ ಉಪರಾಷ್ಟ್ರಪತಿಯಾಗಿ ಚಂದ್ರಾಪುರಂ ಪೊನ್ನುಸ್ವಾಮಿ ರಾಧಾಕೃಷ್ಣನ್ ಅವರು ಪ್ರಮಾಣ ವಚನ ಸ್ವೀಕರಿಸಿದ್ದಾರೆ ಹಾಗೂ ನಮ್ಮ ಕರ್ನಾಟಕ ವಿಧಾನ ಪರಿಷತ್ತಿಗೆ ನೂತನವಾಗಿ ಡಾ. ಆರತಿ ಕೃಷ್ಣ, ರಮೇಶ್ ಬಾಬು, ಎಫ್. ಎಚ್. ಜಕ್ಕಪ್ಪನವರ್ ಮತ್ತು ಶಿವಕುಮಾರ್ ಕೆ. ಅವರು ನಾಮ ನಿರ್ದೇಶನಗೊಂಡಿದ್ದಾರೆ. ಈ ಎಲ್ಲರಿಗೂ ರಾಜ್ಯದ ಸಹಕಾರಿಗಳ ಪರವಾಗಿ ಅಭಿನಂದನೆಗಳು.

**▸▸ ವಿರೂಪಾಕ್ಷಪ್ಪ ಎಂ., ಬಳ್ಳಾರಿ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

ಇವರಿಗೆ,

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.